MS – 379

**IV Semester B.Com. Examination, May/June 2014**
**(Semester Scheme) (Freshers)**
**(2013-14 and Onwards)**
**COMMERCE**
**Paper – 4.4 : Cost Accounting**

Time : 3 Hours Max. Marks : 100

***Instruction :*** *Answer should be written **completely** either in **Kannada** or in **English**.*

SECTION – A

Answer **any ten** sub-questions. **Each** sub-question carries **two** marks. **(10×2=20)**

1. a) What is a cost centre ?
   b) What is a cost sheet ?
   c) State the three elements of cost.
   d) What is EOQ ? How is it calculated ?
   e) What is meant by VED analysis ?
   f) State two advantages of LIFO method of pricing issues.
   g) Differentiate between time keeping and time booking.
   h) State the causes of idle time.
   i) What is notional cost ? Give an example.
   j) State the basis of apportionment of (a) Motive power (b) Insurance of plant (c) Indirect wages and (d) Labour welfare expenses.
   k) Give the meaning of semi-variable cost.
   l) What is memorandum reconciliation account ?

SECTION – B

Answer **any four** questions. **Each** question carries **eight** marks. **(4×8=32)**

2. State the causes for the difference in profits as per cost accounts and financial accounts.

3. Calculate Total Factory cost and Factory cost per unit from the following information :

| | Rs. |
|---|---|
| Number of units of raw material consumed | 10,000 |
| Cost of material consumed | 1,00,000 |
| Direct wages | 50,000 |
| Direct expenses | 30,000 |
| Factory overheads | 1,20,000 |
| Opening stock of work-in-progress (2000 units) | 60,000 |
| Closing stock of work-in-progress (3000 units) | ? |

4. In a manufacturing concern, particulars of material 'A' is as follows :
   Re-order quantity 3600 units
   Maximum consumption 900 units
   Minimum consumption 300 units
   Re-order period 3 to 5 weeks
   Calculate (a) Re-order level (b) Minimum level (c) Maximum level and (d) Average level.

5. ABC Ltd., requires 1500 units of a material per month costing Rs. 27 per unit. Cost per order is Rs. 150 and the inventory carrying cost works out to 20% of the average inventory. Find out the EOQ and the number of orders to be placed in a year.

6. A worker works with a 44 hours guaranteed wages. Rate per hour is Rs. 50. Time allowed to produce one unit is 30 minutes and under incentive scheme time allowed to produce one unit is increased by 20%. During a week the worker produces 100 units. Calculate the wages of the worker under Halsey Plan (50 : 50) and Rowan Plan.

## SECTION – C

Answer **any three** of the following. **Each** question carries **sixteen** mark. **(3×16=48)**

7. The Managing Director of a Small Manufacturing Concern consults you as to the minimum price at which he can sell the output. The company records show the following particulars relating to last year :

| | |
|---|---|
| Number of units produced and sold | 100 |
| | **Rs.** |
| Direct material | 3,900 |
| Direct labour | 2,100 |

| | |
|---|---|
| Direct charges | 300 |
| Works on-cost | 2,100 |
| Office on-cost | 840 |
| Selling on-cost | 960 |
| Profit | 1,500 |
| Total | **11,700** |

It is ascertained from the records that 40% of the works on-cost fluctuates directly with the production and 70% of selling on-cost fluctuate with sales. It is anticipated that the department would produce 1,000 units per annum next year and direct labour charges per unit will be reduced by 20%.

The fixed works-on-cost will increase by Rs. 900. The office on-cost and fixed selling on-cost are anticipated to show an increase of 25%.

Prepare a statement for submission to your client.

8. The following transactions took place in respect of a material 'X'

| Date | Receipts (Units) | Rate per unit (Rs.) | Issues (Units) |
|---|---|---|---|
| 2014 March | | | |
| 2 | 2,000 | 2.00 | – |
| 4 | 3,000 | 2.40 | – |
| 6 | – | – | 2,500 |
| 8 | 2,500 | 2.60 | – |
| 10 | – | – | 2,000 |

Prepare stores ledger account under Simple Average Price Method and Weighted Average Price Method.

9. Shivu Ltd., has three production and two service departments. From the following details prepare the overhead distribution summary using repeated distribution method for secondary distribution and calculate overhead rate per labour hour.

| Particulars | Production Departments | | | Service Departments | |
|---|---|---|---|---|---|
| | A | B | C | D | E |
| Direct Materials (Rs.) | 45,000 | 30,000 | 15,000 | 12,000 | 9,000 |
| Direct Wages (Rs.) | 30,000 | 22,500 | 15,000 | 6,000 | 4,500 |
| Value of Machinery (Rs.) | 60,000 | 45,000 | 30,000 | – | – |

| | | | | | |
|---|---|---|---|---|---|
| Floor Area (Sq.ft.) | 30,000 | 20,000 | 15,000 | 10,000 | 5,000 |
| HP of Machines | 240 | 200 | 160 | – | – |
| No. of light points | 120 | 90 | 60 | 30 | 30 |
| No. of labour hours | 5,000 | 5,000 | 5,000 | – | – |

**Other details** :

Indirect Materials Rs. 22,200; Indirect Wages Rs. 15,600; Depreciation on Machinery Rs. 27,000; Depreciation on Building Rs. 12,000; Rent, Rates and Taxes Rs. 9,000; Electric Power Rs. 33,750; Lighting Rs. 2,400; General Expenses Rs. 7,800.

The services rendered by each service department to other departments is as under :

| Department | A | B | C | D | E |
|---|---|---|---|---|---|
| D | 30% | 40% | 20% | – | 10% |
| E | 10% | 20% | 50% | 20% | – |

10. The net profits of a manufacturing company appeared at Rs. 76,500 as per financial accounts for the year ended 31st March, 2014. The cost books, however, revealed a net profit of Rs. 88,460 for the same period. A careful scrutiny of the figures from both the sets of accounts revealed the following facts :

Income tax provided in financial books Rs. 10,000

Bank interest credited in financial books Rs. 250

Works overheads under recovered in cost books Rs. 1,550

Depreciation charged in financial books Rs. 5,600

Depreciation recovered in cost books Rs. 6,000

Administrative overheads over recovered Rs. 850

Loss due to obsolescence in financial accounts Rs. 2,800

Interest on investments not included in cost accounts Rs. 4,000

Stores adjustment (credited in financial books) Rs. 240

Loss due to depreciation in stock values charged in financial accounts 3,350

Prepare Reconciliation Statement.

## ಕನ್ನಡ ಆವೃತ್ತಿ

### ವಿಭಾಗ - ಎ

ಯಾವುದಾದರೂ ಹತ್ತು ಉಪ – ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಉಪ – ಪ್ರಶ್ನೆಗೂ ಎರಡು ಅಂಕಗಳು. **(10×2=20)**

1. ಅ) ವೆಚ್ಚ ಕೇಂದ್ರ ಎಂದರೇನು ?
   ಆ) ವೆಚ್ಚ ಪಟ್ಟಿ ಎಂದರೇನು ?
   ಇ) ವೆಚ್ಚದ ಮೂರು ಅಂಶಗಳಾವುವು ?
   ಈ) EOQ ಎಂದರೇನು ? ಅದನ್ನು ಹೇಗೆ ಲೆಕ್ಕ ಹಾಕುವುದು ?
   ಉ) VED ವಿಶ್ಲೇಷಣೆ ಎಂಬುದರ ಅರ್ಥವೇನು ?
   ಊ) LIFO ವಿಧಾನದಲ್ಲಿ ನೀಡಿಕೆಗಳ ಬೆಲೆ ನಿಗದೀಕರಣದ ಎರಡು ಅನುಕೂಲಗಳನ್ನು ಬರೆಯಿರಿ.
   ಋ) ಸಮಯದ ಲೆಕ್ಕ ಇಡುವಿಕೆ ಹಾಗೂ ಸಮಯದ ಪರಿಗಣನೆ ನಡುವೆ ವ್ಯತ್ಯಾಸಿಸಿ.
   ಎ) ನಿರುಪಯೋಗಿ ಸಮಯದ ಕಾರಣಗಳನ್ನು ಬರೆಯಿರಿ.
   ಏ) ಊಹಾತ್ಮಕ ವೆಚ್ಚ ಎಂದರೇನು ? ಒಂದು ಉದಾಹರಣೆ ಕೊಡಿ.
   ಐ) (ಅ) ವಿದ್ಯುತ್ ಶಕ್ತಿ (ಆ) ಸ್ಥಾವರ ವಿಮೆ (ಇ) ಅಪರೋಕ್ಷ ಮಜೂರಿ ಮತ್ತು (ಈ) ಕಾರ್ಮಿಕ ಒಳಿತು ವೆಚ್ಚಗಳು ಇವುಗಳನ್ನು ವಿಂಗಡಿಸುವಿಕೆಯ ಆಧಾರಗಳನ್ನು ಬರೆಯಿರಿ.
   ಒ) ಅಂಶಿಕ ಏರಿಳಿತ ವೆಚ್ಚದ ಅರ್ಥವನ್ನು ನೀಡಿ.
   ಓ) ಮೆಮೊರ್‍ಯಾಂಡಮ್ ಹೊಂದಾಣಿಕೆ ಖಾತೆ ಎಂದರೇನು ?

### ವಿಭಾಗ - ಬಿ

ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೂ ಎಂಟು ಅಂಕಗಳು. **(4×8=32)**

2. ವೆಚ್ಚ ಲೆಕ್ಕ ಶಾಸ್ತ್ರ ಮತ್ತು ಹಣಕಾಸು ಲೆಕ್ಕ ಶಾಸ್ತ್ರದ ನಡುವಿನ ಲಾಭಗಳಲ್ಲಿ ವ್ಯತ್ಯಾಸಗಳಿಗೆ ಕಾರಣವಾಗುವ ಅಂಶಗಳನ್ನು ಬರೆಯಿರಿ.

3. ಒಟ್ಟು ಕೈಗಾರಿಕಾ ವೆಚ್ಚ ಮತ್ತು ಪ್ರತಿ ಯುನಿಟ್‌ನ ಕೈಗಾರಿಕಾ ವೆಚ್ಚವನ್ನು ಕೆಳಕಂಡ ಮಾಹಿತಿಯಿಂದ ಲೆಕ್ಕ ಮಾಡಿ.

| | ರೂ. |
|---|---|
| ಕಚ್ಚಾ ವಸ್ತುಗಳು ಬಳಕೆಯಾದ ಯುನಿಟ್‌ಗಳ ಸಂಖ್ಯೆ | 10000 |
| ಬಳಕೆಯಾದ ಕಚ್ಚಾ ವಸ್ತುಗಳ ವೆಚ್ಚ | 1,00,000 |
| ನೇರ ಮಜೂರಿ | 50,000 |

| | |
|---|---|
| ನೇರ ವೆಚ್ಚಗಳು | 30,000 |
| ಕೈಗಾರಿಕಾ ಮೇಲ್ವೆಚ್ಚಗಳು | 1,20,000 |
| ಪ್ರಗತಿಯಲ್ಲಿರುವ ಕಾರ್ಯದ ಆರಂಭಿಕ ದಾಸ್ತಾನು (2000 ಯುನಿಟ್‌ಗಳು) | 60,000 |
| ಪ್ರಗತಿಯಲ್ಲಿರುವ ಕಾರ್ಯದ ಅಂತಿಮ ದಾಸ್ತಾನು (3000 ಯುನಿಟ್‌ಗಳು) | ? |

4. ಒಂದು ಉತ್ಪಾದನಾ ಕಂಪನಿಯಲ್ಲಿ ಪದಾರ್ಥ 'ಎ' ಗೆ ಸಂಬಂಧಿಸಿದ ವಿವರಗಳು ಕೆಳಕಂಡಂತಿವೆ:
   ಮರು ಆದೇಶ ಪ್ರಮಾಣ 3600 ಯುನಿಟ್‌ಗಳು
   ಗರಿಷ್ಠ ಬಳಕೆ – 900 ಯುನಿಟ್‌ಗಳು
   ಕನಿಷ್ಠ ಬಳಕೆ – 300 ಯುನಿಟ್‌ಗಳು
   ಮರು ಆದೇಶ ಅವಧಿ – 3 ರಿಂದ 5 ವಾರಗಳು
   (1) ಮರು ಆದೇಶ ಮಟ್ಟ (2) ಕನಿಷ್ಠ ಮಟ್ಟ (3) ಗರಿಷ್ಠ ಮಟ್ಟ ಮತ್ತು (4) ಸರಾಸರಿ ಮಟ್ಟ ಲೆಕ್ಕ ಮಾಡಿ.

5. ಎಬಿಸಿ ಲಿಮಿಟೆಡ್‌ಗೆ ಪ್ರತಿ ಯುನಿಟ್‌ಗೆ ರೂ. 27 ತಗಲುವ 1500 ಯುನಿಟ್ ವಸ್ತುಗಳ ಅವಶ್ಯಕತೆ ಇದೆ. ಮರು ಆದೇಶ ವೆಚ್ಚ ರೂ. 150 ಮತ್ತು ಸರಕು ಸಂಗ್ರಹಣೆ ವೆಚ್ಚ ಸರಾಸರಿ ಸರಕು ಸಂಗ್ರಹದ 20%. ಮಿತವ್ಯಯಿ ಆದೇಶ ಪ್ರಮಾಣ ಮತ್ತು ಒಂದು ವರ್ಷದಲ್ಲಿ ಮಾಡಬೇಕಾದ ಆದೇಶಗಳ ಸಂಖ್ಯೆ ಕಂಡುಹಿಡಿಯಿರಿ.

6. ಒಬ್ಬ ಕಾರ್ಮಿಕನು 44 ಗಂಟೆಗಳ ಭರವಸೆಯ ಮಜೂರಿಗೆ ಕೆಲಸ ಮಾಡುತ್ತಾನೆ. ಪ್ರತಿ ಗಂಟೆಗೆ ದರ ರೂ. 50. ಒಂದು ಯುನಿಟ್ ಉತ್ಪನ್ನ ಮಾಡಲು ಒದಗಿಸಲಾಗುವ ಸಮಯ 30 ನಿಮಿಷಗಳು ಮತ್ತು ಒದಗಿಸಲಾಗುವ ಸಮಯವನ್ನು ಉತ್ತೇಜಕ ಸ್ಕೀಂನಲ್ಲಿ 20% ಹೆಚ್ಚಿಸಲಾಗುವುದು. ಕಾರ್ಮಿಕನು ಒಂದು ವಾರದಲ್ಲಿ 100 ಯುನಿಟ್‌ಗಳನ್ನು ಉತ್ಪಾದಿಸುತ್ತಾನೆ. ಕಾರ್ಮಿಕನ ಮಜೂರಿಯನ್ನು ಹಾಲ್ಸೆ ಯೋಜನೆ (50 : 50) ಮತ್ತು ರೋವನ್ ಯೋಜನೆಯಡಿಯಲ್ಲಿ ಲೆಕ್ಕ ಮಾಡಿ.

## ವಿಭಾಗ – ಸಿ

ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೂ ಹದಿನಾರು ಅಂಕಗಳು. **(3×16=48)**

7. ಒಂದು ಸಣ್ಣ ಉತ್ಪಾದನಾ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ಯಾವ ಕನಿಷ್ಠ ಬೆಲೆಗೆ ತಮ್ಮ ಉತ್ಪನ್ನವನ್ನು ಮಾರಬಹುದು ಎಂದು ತಿಳಿಯಲು ನಿಮ್ಮನ್ನು ಸಮಾಲೋಚಿಸುತ್ತಾರೆ. ಕಂಪನಿಯ ಕಡತಗಳು ಕಳೆದ ವರ್ಷಕ್ಕೆ ಸಂಬಂಧಪಟ್ಟಂತೆ ಕೆಳಕಂಡ ವಿವರಗಳನ್ನು ತೋರಿಸುತ್ತಿವೆ.

   ಉತ್ಪಾದನೆ ಮತ್ತು ಮಾರಾಟವಾದ ಯುನಿಟ್‌ಗಳ ಸಂಖ್ಯೆ 100

| | ರೂ. |
|---|---|
| ನೇರ ಪದಾರ್ಥಗಳು | 3,900 |
| ನೇರ ಮಜೂರಿ | 2,100 |
| ನೇರ ವೆಚ್ಚಗಳು | 300 |
| ಕೈಗಾರಿಕಾ ಮೇಲ್ವೆಚ್ಚಗಳು | 2,100 |

| | |
|---|---|
| ಆಡಳಿತ ಮೇಲ್ವೆಚ್ಚಗಳು | 840 |
| ಮಾರಾಟ ಮೇಲ್ವೆಚ್ಚಗಳು | 960 |
| ಲಾಭ | 1,500 |
| ಒಟ್ಟು ಮೊತ್ತ | **11,700** |

40% ಕೈಗಾರಿಕಾ ಮೇಲ್ವೆಚ್ಚಗಳು ನೇರವಾಗಿ ಉತ್ಪಾದನೆಯೊಂದಿಗೆ ಹಾಗೂ 70% ಮಾರಾಟ ಮೇಲ್ವೆಚ್ಚಗಳು ಮಾರಾಟದೊಂದಿಗೆ ಏರಿಳಿತವಾಗುತ್ತವೆ ಎಂದು ದಾಖಲೆಗಳಿಂದ ತಿಳಿದುಬಂದಿರುತ್ತದೆ. ಮುಂದಿನ ವರ್ಷ ವಾರ್ಷಿಕ 1000 ಯುನಿಟ್‌ಗಳನ್ನು ಘಟಕವು ಉತ್ಪಾದಿಸುವುದೆಂದು ನಿರೀಕ್ಷಿಸಲಾಗಿದ್ದು ಪ್ರತಿ ಯುನಿಟ್‌ನ ಮೇಲೆ ನೇರ ಮಜೂರಿ ವೆಚ್ಚಗಳು 20% ಕಡಿಮೆಯಾಗುವುದು.

ಸ್ಥಿರ ಕೈಗಾರಿಕಾ ಮೇಲ್ವೆಚ್ಚಗಳು ರೂ. 900 ರಷ್ಟು ಏರಿಕೆಯಾಗುವುದು. ಆಡಳಿತ ಮೇಲ್ವೆಚ್ಚಗಳು ಮತ್ತು ಸ್ಥಿರ ಮಾರಾಟ ಮೇಲ್ವೆಚ್ಚಗಳು 25% ಏರಿಕೆಯಾಗುವ ನಿರೀಕ್ಷೆ ಮಾಡಲಾಗಿದೆ.

ನಿಮ್ಮ ಗಿರಾಕಿಗೆ ಕೊಡಲು ಒಂದು ಪಟ್ಟಿಯನ್ನು ತಯಾರಿಸಿ.

8. ಕೆಳಕಂಡ ವ್ಯವಹಾರಗಳು 'X' ಎಂಬ ವಸ್ತುವಿನ ಸಂಬಂಧ ನಡೆದಿವೆ :

| ದಿನಾಂಕ | ಸ್ವೀಕೃತಿ(ಯುನಿಟ್‌ಗಳು) | ಪ್ರತಿ ಯುನಿಟ್ ದರ(ರೂ.) | ನೀಡಿಕೆ(ಯುನಿಟ್‌ಗಳು) |
|---|---|---|---|
| 2014 ಮಾರ್ಚ್ | | | |
| 2 | 2,000 | 2.00 | – |
| 4 | 3,000 | 2.40 | – |
| 6 | – | – | 2,500 |
| 8 | 2,500 | 2.60 | – |
| 10 | – | – | 2,000 |

ಸ್ಟೋರ್ಸ್ ಲೆಡ್ಜರ್ ಖಾತೆಯನ್ನು ಸಾಧಾರಣ ಸರಾಸರಿ ಬೆಲೆ ವಿಧಾನ ಮತ್ತು ತೂಗು ಸರಾಸರಿ ಬೆಲೆ ವಿಧಾನದಡಿಯಲ್ಲಿ ತಯಾರಿಸಿ.

9. ಶಿವು ಲಿಮಿಟೆಡ್ ಮೂರು ಉತ್ಪಾದನಾ ಹಾಗೂ ಎರಡು ಸೇವಾ ವಿಭಾಗಗಳನ್ನು ಹೊಂದಿದೆ. ಕೆಳಕಂಡ ವಿವರಗಳಿಂದ ಮೇಲ್ವೆಚ್ಚಗಳ ವಿತರಣಾ ಪಟ್ಟಿಯನ್ನು ದ್ವಿತೀಯ ವಿತರಣೆಗೆ ಮರು ವಿತರಣಾ ವಿಧಾನವನ್ನು ಬಳಸಿಕೊಂಡು ತಯಾರಿಸಿ ಹಾಗೂ ಪ್ರತಿ ಶ್ರಮಿಕ ಗಂಟೆಗೆ ತಗಲುವ ಮೇಲ್ವೆಚ್ಚ ದರ ಲೆಕ್ಕ ಮಾಡಿ.

| ವಿವರಗಳು | ಉತ್ಪಾದನಾ ವಿಭಾಗಗಳು | | | ಸೇವಾ ವಿಭಾಗಗಳು | |
|---|---|---|---|---|---|
| | ಎ | ಬಿ | ಸಿ | ಡಿ | ಇ |
| ನೇರ ವಸ್ತುಗಳು (ರೂ.) | 45,000 | 30,000 | 15,000 | 12,000 | 9,000 |
| ನೇರ ಮಜೂರಿ (ರೂ.) | 30,000 | 22,500 | 15,000 | 6,000 | 4,500 |

| | | | | | |
|---|---|---|---|---|---|
| ಯಂತ್ರದ ಮೌಲ್ಯ (ರೂ.) | 60,000 | 45,000 | 30,000 | – | – |
| ನೆಲದ ವಿಸ್ತೀರ್ಣ (ಚ. ಅಡಿ) | 30,000 | 20,000 | 15,000 | 10,000 | 5,000 |
| ಯಂತ್ರಗಳ ಅಶ್ವ ಶಕ್ತಿ | 240 | 200 | 160 | – | – |
| ದೀಪ ಮೂಲಗಳ ಸಂಖ್ಯೆ | 120 | 90 | 60 | 30 | 30 |
| ಶ್ರಮಿಕ ಗಂಟೆಗಳ ಸಂಖ್ಯೆ | 5,000 | 5,000 | 5,000 | – | – |

**ಇತರೆ ವಿವರಗಳು :**

ಪರೋಕ್ಷ ವಸ್ತುಗಳ ರೂ. 22,200; ಪರೋಕ್ಷ ಮಜೂರಿ ರೂ. 15,600; ಯಂತ್ರಗಳ ಮೇಲೆ ಸವಕಳಿ ರೂ. 27,000; ಕಟ್ಟಡಗಳ ಮೇಲೆ ಸವಕಳಿ ರೂ. 12,000; ಬಾಡಿಗೆ, ದರ ಮತ್ತು ತೆರಿಗೆ ರೂ. 9,000; ವಿದ್ಯುತ್ ಶಕ್ತಿ ರೂ. 33,750; ಬೆಳಕಿನ ವ್ಯವಸ್ಥೆ ರೂ. 2,400; ಸಾಮಾನ್ಯ ಖರ್ಚುಗಳು ರೂ. 7,800

ಪ್ರತಿ ಸೇವಾ ವಿಭಾಗವೂ ಇತರೆ ವಿಭಾಗಗಳಿಗೆ ಸಲ್ಲಿಸುವ ಸೇವೆಗಳು ಕೆಳಗಿನಂತಿವೆ :

| ವಿಭಾಗ | ಎ | ಬಿ | ಸಿ | ಡಿ | ಇ |
|---|---|---|---|---|---|
| ಡಿ | 30% | 40% | 20% | – | 10% |
| ಇ | 10% | 20% | 50% | 20% | – |

10. 31 ಮಾರ್ಚ್ 2014 ಕ್ಕೆ ಕೊನೆಗೊಳ್ಳುವ ಹಣಕಾಸು ದಾಖಲೆಗಳ ಪ್ರಕಾರ ಒಂದು ಉತ್ಪಾದನಾ ಕಂಪೆನಿಯ ಲಾಭ ರೂ. 76,500 ಎಂದು ಕಂಡು ಬಂದಿದೆ. ಆದರೆ ಅದೇ ಅವಧಿಗೆ ವೆಚ್ಚ ದಾಖಲೆಗಳಲ್ಲಿ ಲಾಭವು ರೂ. 88,460 ಎಂದು ತೋರಿಸಿದೆ. ಎರಡೂ ಪುಸ್ತಕಗಳ ಪರಿಶೀಲನೆಯು ಕೆಳಕಂಡ ವಾಸ್ತವಾಂಶಗಳನ್ನು ಬಹಿರಂಗ ಪಡಿಸಿದವು.

ಹಣಕಾಸು ಪುಸ್ತಕಗಳಲ್ಲಿ ಒದಗಿಸಿರುವ ಆದಾಯ ತೆರಿಗೆ ರೂ. 10,000

ಬ್ಯಾಂಕ್ ಬಡ್ಡಿ ಹಣಕಾಸು ಪುಸ್ತಕಗಳಲ್ಲಿ ಕ್ರೆಡಿಟ್ ಮಾಡಿರುವುದು ರೂ. 250

ಕೈಗಾರಿಕಾ ಮೇಲ್ವೆಚ್ಚಗಳು ವೆಚ್ಚ ಪುಸ್ತಕಗಳಲ್ಲಿ ಕಡಿಮೆ ವಸೂಲು ಮಾಡಿಕೊಂಡಿರುವುದು ರೂ. 1,550

ಹಣಕಾಸು ಪುಸ್ತಕಗಳಲ್ಲಿ ಸವಕಳಿ ತೆಗೆದಿರುವುದು ರೂ. 5,600

ವೆಚ್ಚ ಪುಸ್ತಕಗಳಲ್ಲಿ ಸವಕಳಿ ತೆಗೆದಿರುವುದು ರೂ. 6,000

ಆಡಳಿತ ಮೇಲ್ವೆಚ್ಚಗಳು ಅಧಿಕ ವಸೂಲು ಮಾಡಿಕೊಂಡಿರುವುದು ರೂ. 850

ಹಣಕಾಸು ದಾಖಲೆಗಳಲ್ಲಿ ಹಳೆಯದೆಂದು ನಷ್ಟ ದಾಖಲಿಸಿರುವುದು ರೂ. 2,800

ವೆಚ್ಚ ದಾಖಲೆಗಳಲ್ಲಿ ಹೂಡಿಕೆಗಳ ಮೇಲೆ ಬಡ್ಡಿ ಸೇರಿಸಿಲ್ಲದಿರುವುದು ರೂ. 4,000

ಹಣಕಾಸು ದಾಖಲೆಗಳಲ್ಲಿ ಉಗ್ರಾಣ ಹೊಂದಾಣಿಕೆ (ಕ್ರೆಡಿಟ್) ರೂ. 240

ದಾಸ್ತಾನು ಸವಕಳಿಯಿಂದಾದ ನಷ್ಟ ಹಣಕಾಸು ದಾಖಲೆಗಳಲ್ಲಿ ತೆಗೆದು ಹಾಕಿರುವುದು ರೂ. 3,350

ಹೊಂದಾಣಿಕೆ ಪಟ್ಟಿ ತಯಾರಿಸಿ.